## ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
## ಸ್ಥಳಃ ಅರಕಲಗೂಡು

ಸಿಸಿ ನಂ. **88/2021**

ದಿನಾಂಕಃ **13/01/2022**

ಪಿರ್ಯಾದಿಃ ಶ್ರೀ. ಸುರೇಶ್ ಬಿನ್ ಜವರೇಗೌಡ .

ವಿರುದ್ಧ

ಆರೋಪಿಃ ಶ್ರೀ. ರಂಜಿತ ಹೆಚ್.ಜೆ ಬಿನ್ ಜಯಣ್ಣ.

### ಆಪಾದನೆ

ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ ವೈಯಕ್ತಿಕವಾಗಿ ಅಕ್ಟೋಬರ್-2020 ರಲ್ಲಿ ರೂ.3,50,000/- ಹಣವನ್ನು ಕೈಸಾಲವಾಗಿ ಪಡೆದುಕೊಂಡಿದ್ದು, ನಂತರ ಪಿರ್ಯಾದುದಾರರ ವಿನಂತಿ ಮೇರೆಗೆ ಸಾಲದ ಮರುಪಾವತಿಗಾಗಿ ಮೇಲ್ಕಂಡ ಆರೋಪಿಯಾದ ನೀವು ನಿಮ್ಮ ಉಳಿತಾಯ ಖಾತೆ ಇರುವ ಕೆನರಾ ಬ್ಯಾಂಕ್, ಗಂಗೂರು ಶಾಖೆಗೆ, ಸೇರಿದ ಚೆಕ್ ಸಂಖ್ಯೆಃ 604749 ರಲ್ಲಿ ದಿನಾಂಕಃ01.12.2020 ರೂ.3,50,000/- ಎಂದು ನಮೂದಿಸಿದ ಚೆಕನ್ನು ನೀಡಿದ್ದು, ನಂತರ ಪಿರ್ಯಾದಿ ಸದರಿ ಚೆಕ್‌ನ್ನು ನಗದೀಕರಿಸಿಕೊಳ್ಳಲು ತಮ್ಮ ಉಳಿತಾಯ ಖಾತೆ ಇರುವ ಕರ್ನಾಟಕ ಬ್ಯಾಂಕ್, ರುದ್ರಪಟ್ಟಣ ಶಾಖೆಯ ಮುಖಾಂತರ ಹಾಜರುಪಡಿಸಿದಾಗ ಸದರಿ ಬ್ಯಾಂಕ್‌ನವರು " ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ” ಎಂಬ ಹಿಂಬರದೊಂದಿಗೆ ಸದರಿ ಚೆಕ್ ಅಮಾನ್ಯಗೊಂಡಿದ್ದು ನಂತರ ಪಿರ್ಯಾದಿಯವರು ತಮ್ಮ ವಕೀಲರ ಮುಖಾಂತರ ದಿನಾಂಕಃ 18-12-2020 ರಂದು ನಿಮಗೆ ನೋಟೀಸ್ ಕಳುಹಿಸಿದ್ದು, ನೋಟೀಸ್ ನ್ನು ನೀವು ಪಡೆದುಕೊಂಡಿದ್ದರೂ ಈ ವಿಚಾರ ತಿಳಿದಿದ್ದರೂಾ ಸಹ ಹಣವನ್ನು ಮರುಪಾವತಿ ಮಾಡಿರುವುದಿಲ್ಲ, ಇದರಿಂದ ಆರೋಪಿಯಾದ ನೀವು ನೆಗೋಷಿಯೇಬಲ್ ಇನ್ಸ್ಟ್ರುಮಂಟ್ ಕಾಯ್ದೆ ಕಲಂ 138 ರನ್ವಯ ಶಿಕ್ಷಾರ್ಹವಾದ ಅಪರಾಧ ಎಸಗಿದ್ದಿರೆಂದು ಆಪಾದಿಸಲಾಗಿದೆ.

ಪ್ರಶ್ನೆ 1. ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ ?

ಉತ್ತರ

ಪ್ರಶ್ನೆ 2. ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರ

ಪ್ರಶ್ನೆ 3. ನಿಮಗೆ ಏನಾದರೂ ಹೇಳುವುದಿದೆಯೇ ?

ಉತ್ತರ.

ಪ್ರಶ್ನೆ 4. ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೇ ?

ಉತ್ತರ

(ದಿನಾಂಕ 13-01-2022 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.)

**(ಪ್ರೀತಿ ಎಲ್.ಮಳವಳ್ಳಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಅರಕಲಗೂಡು